ನಿರೀಕ್ಷೆಯಲ್ಲಿರುವ ಸಿನಿಮಾ. ಬಾಲಿವುಡ್‌ನಲ್ಲಿ ಚಿತ್ರರಸಿಕರ ಗಮನಸೆಳೆದಿದ್ದ 'ಕ್ವೀನ್' ಚಿತ್ರದ ಕನ್ನಡ ಅವತರಣಿಕೆಯಾದ 'ಬಟರ್‌ಫ್ಲೈ'ನಲ್ಲಿ ಪರೂಲ್ ಯಾದವ್ ನಾಯಕಿಯಾಗಿ ನಟಿಸಿದ್ದಾರೆ. ರೀಮೇಕ್ ಕಥನವಾದರೂ, ರಮೇಶ್‌ರ ನಿರ್ದೇಶನ ಹಾಗೂ ಕಥೆಯಲ್ಲಿನ ಸೂಕ್ಷ್ಮ ಕಂಪನಗಳು ಚಿತ್ರದ ಬಗ್ಗೆ ಕುತೂಹಲ ಮೂಡಲಿಕ್ಕೆ ಕಾರಣವಾಗಿದೆ.

'ರುಸ್ತುಂ' ಚಿತ್ರವನ್ನು ಶಿವರಾಜ್‌ಕುಮಾರ್ ಪ್ರಯೋಗಶೀಲತೆಯ ಮತ್ತೊಂದು ಪ್ರಯತ್ನವೆಂದೇ ಗುರ್ತಿಸಲಾಗುತ್ತಿದೆ. ಜೂನ್ ಕೊನೆಯಲ್ಲಿ ಅಥವಾ ಜುಲೈ ಆರಂಭದಲ್ಲಿ ತೆರೆಕಾಣಲಿರುವ ಈ ಚಿತ್ರದ ಟ್ರೈಲರ್ ಹಾಗೂ ಹಾಡು ಚಿತ್ರದ ಮಾಸ್ ಕಂಟೆಂಟ್ ಅನ್ನು ಸೂಚಿಸುವಂತಿವೆ. ಸಾಹಸ ನಿರ್ದೇಶಕ ರವಿವರ್ಮ ಚೊಚ್ಚಿಲ ನಿರ್ದೇಶನದ ಸಿನಿಮಾ ಎನ್ನುವುದು ಕೂಡ 'ರುಸ್ತುಂ' ಬಗ್ಗೆ ನಿರೀಕ್ಷೆಗಳನ್ನು ಹೆಚ್ಚಿಸಿದೆ.

ನಟ ಧ್ರುವ ಸರ್ಜಾ ಎರಡು ವರ್ಷಕ್ಕೆ ಒಂದು ಸಿನಿಮಾ ಮಾಡುತ್ತಿದ್ದಾರೆ. 'ಭರ್ಜರಿ' ಸಿನಿಮಾದ ನಂತರ 'ಪೊಗರು' ತೋರಿಸುವುದಕ್ಕೆ ಧ್ರುವ ಸರ್ಜಾ ಸಜ್ಜಾಗುತ್ತಿದ್ದರು. ಇದೀಗ ಈ ಸಿನಿಮಾದ ಬಿಡುಗಡೆಯ ದಿನಾಂಕ ನಿಗದಿಯಾಗಿದೆ.

ಧ್ರುವ ಸರ್ಜಾ ಅಭಿನಯದ 'ಪೊಗರು' ಆಗಸ್ಟ್ ತಿಂಗಳಲ್ಲಿ ತೆರೆಕಾಣುವ ಸಾಧ್ಯತೆಯಿದೆ. 2018ರಲ್ಲೇ ತೆರೆಕಾಣಬೇಕಿದ್ದ ಈ ಚಿತ್ರ ಕುಂಟುತ್ತಾ ಒಂದು ವರ್ಷ ವಿಳಂಬವಾಗಿದೆ. ಧ್ರುವ ಅವರೊಂದಿಗೆ, ತೆಲುಗಿನ ಜಗಪತಿ ಬಾಬು, 'ಡಾಲಿ' ಧನಂಜಯ್, ರವಿಶಂಕರ್ ತಾರಾಗಣದಲ್ಲಿದ್ದಾರೆ. ರಾಘವೇಂದ್ರ ರಾಜ್‌ಕುಮಾರ್ ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ನಂದಕಿಶೋರ್ ನಿರ್ದೇಶನದ ಈ ಸಿನಿಮಾದಲ್ಲಿ ಧ್ರುವ ಅವರಿಗೆ ಜೋಡಿಯಾಗಿ ರಶ್ಮಿಕಾ ಮಂದಣ್ಣ ನಟಿಸಿರುವುದು ವಿಶೇಷ. ಶಾನ್ವಿ ಚಿತ್ರದ ಮತ್ತೊಬ್ಬ ನಾಯಕಿ. ಈ ಚಿತ್ರದ ಪಾತ್ರಕ್ಕಾಗಿ ಧ್ರುವ ಅವರು ಸುಮಾರು 30 ಕಿಲೋ ತೂಕ ಇಳಿಸಿಕೊಂಡಿದ್ದು ಸುದ್ದಿಯಾಗಿತ್ತು. ಧ್ರುವ ಅವರ ಈವರೆಗಿನ ಚಿತ್ರಗಳ ಭರಾಟೆಯನ್ನು ಲೆಕ್ಕಕ್ಕೆ ಹಿಡಿದರೆ, 'ಪೊಗರು' ಕೂಡ ಗಲ್ಲಾಪೆಟ್ಟಿಗೆಯಲ್ಲಿ ಸೌಂಡ್ ಮಾಡುವ ಸಾಧ್ಯತೆಗಳು ಹೆಚ್ಚು.

'ಬೆಲ್ ಬಾಟಂ'ನ ಜಯತೀರ್ಥ ಆಗಸ್ಟ್‌ನಲ್ಲಿ ಮತ್ತೊಂದು ಚಿತ್ರದ ಶೂಟಿಂಗ್ ಆರಂಭಿಸುವ ಸಾಧ್ಯತೆಯಿದೆ. ಈ ಬಾರಿ ಅವರು, ರಾಜಕಾರಣಿ ಜಮೀರ್ ಅಹಮದ್‌ರ ಪುತ್ರ ಜೈದ್ ಖಾನ್‌ರನ್ನು ಚಿತ್ರರಂಗಕ್ಕೆ ಪರಿಚಯಿಸುತ್ತಿದ್ದಾರೆ. ವಾರಾಣಸಿಯಲ್ಲಿ ಲೊಕೇಶನ್‌ಗಳನ್ನು ನೋಡಿ ಬಂದಿರುವ ಜಯತೀರ್ಥ, ಮತ್ತೊಂದು 'ಒಲವೇ ಮಂದಾರ' ರೂಪಿಸುವ ಉಮೇದಿನಲ್ಲಿದ್ದಾರೆ. ಅಂದುಕೊಂಡಂತೆ ಆದರೆ, 2019ರಲ್ಲೇ ಜಯತೀರ್ಥ–ಜೈದ್‌ರ ಒಲವು ಸಿನಿಮಾರೂಪದಲ್ಲಿ ಸಾಕಾರಗೊಳ್ಳಬಹುದು.

## ಶುಭಂಗೆ ಮುನ್ನ...

2019ರಲ್ಲಿ ಯಶ್ ಅವರ ಸಿನಿಮಾ ತೆರೆಕಾಣುವ ಸಾಧ್ಯತೆ ಕಡಿಮೆಯಿದ್ದರೂ, ಅವರ ಪ್ರಸ್ತಾಪವಿಲ್ಲದೆ ವರ್ಷದ ಸಿನಿಮಾನೋಟ ಅಪೂರ್ಣವೇ ಸರಿ.


'ಭರಾಟೆ' ಸಿನಿಮಾದಲ್ಲಿ ಶ್ರೀಮುರಳಿ

2018ರ ಕೊನೆಯಲ್ಲಿ ಯಶ್–ಪ್ರಶಾಂತ್ ನೀಲ್ ಜೋಡಿಯ 'ಕೆಜಿಎಫ್' ತೆರೆಕಂಡು ಭಾರತೀಯ ಚಿತ್ರರಸಿಕರ ಗಮನಸೆಳೆದಿತ್ತು. 2019ರ ಕೊನೆಯಲ್ಲಿ ಈ ಚಿತ್ರದ ಉತ್ತರಾರ್ಧ 'ಕೆಜಿಎಫ್ 2' ತೆರೆಕಾಣಬಹುದೇ? ಚಿತ್ರತಂಡದ ಚಟುವಟಿಕೆಗಳ ವೇಗವನ್ನು ನೋಡಿದರೆ ಈ ಚಿತ್ರ ಇದೇ ವರ್ಷ ತೆರೆಕಾಣುವುದು ಕಷ್ಟ. ಆದರೆ, ವರ್ಷದ ಕೊನೆಯ ವೇಳೆಗೆ 'ಕೆಜಿಎಫ್ 2' ಬಗ್ಗೆ ಸ್ಪಷ್ಟ ಚಿತ್ರವೊಂದು ದೊರಕಬಹುದು. 'ಕೆಜಿಎಫ್' ಚಿತ್ರದ ಪೋಷಕ ಪಾತ್ರಗಳ ಆಡಿಷನ್‌ಗೆ ದೇಶದ ವಿವಿಧ ಭಾಗಗಳಿಂದ ಗಡ್ಡಧಾರಿ ಯುವಕರು ಬೆಂಗಳೂರಿಗೆ ಬಂದಿದ್ದು, ಚಿತ್ರದಲ್ಲಿ ಯಶ್ ಲುಕ್ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ನಡೆಯುತ್ತಿರುವ ಚರ್ಚೆಗಳ ಕಾವು 'ಕೆಜಿಎಫ್ 2' ಸಿನಿಮಾದ ಬಗ್ಗೆ ಪ್ರೇಕ್ಷಕರ ನಿರೀಕ್ಷೆಯ ಎತ್ತರವನ್ನು ಸೂಚಿಸುವಂತಿವೆ.

ಒಂದಂತೂ ನಿಜ, 2019ರ ಕನ್ನಡ ಚಿತ್ರರಂಗದ ಉತ್ಸಾಹವನ್ನು 2020ರಲ್ಲಿ ವಿಸ್ತರಿಸಬಹುದಾದ ನಿರೀಕ್ಷೆಯ ರೂಪದಲ್ಲಿ 'ಕೆಜಿಎಫ್ 2'ಗೆ ವಿಶೇಷ ಮಹತ್ವವಿದೆ. ದುನಿಯಾ ಸೂರಿ, ಯೋಗರಾಜ ಭಟ್, ಸುನಿ, ಹೇಮಂತ್‌ರಾವ್, ಸತ್ಯಪ್ರಕಾಶ್‌ರಂಥ ನಿರ್ದೇಶಕರ ಹೊಸ ಕನಸುಗಳು ಕೂಡ ಕನ್ನಡದ ವ್ಯಾಪಾರಿ ಚಿತ್ರರಂಗದ ನಾಳೆಗಳ ಬಗ್ಗೆ ನಿರೀಕ್ಷೆ ಹುಟ್ಟಿಸುವಂತಿವೆ.

ಪ್ರತಿಕ್ರಿಯಿಸಿ: ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in